(ii) Notice of Calling Attenstion reg. demolitions of a Hindu Temple in Singapora

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ, ನಾನು ಒಂದು ಅಮೂಲ್ಯವಾದ ವಿಷಯದ ಬಗ್ಗೆ ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ. ಸಿಂಗಪುರದಲ್ಲಿ ೧೫ ಸಹಸ್ರ ಹಿಂದೂಗಳು ಇದ್ದಾರೆ. ರಾತ್ರೋರಾತ್ರಿ ಹಿಂದೂಗಳಿಗೆ ಸೇರಿದಂತಹ ದೇವಾಲಯವನ್ನು ಹೊಡೆದು ಉರುಳಿಸಿ ನೆಲಸಮ ಮಾಡಿದ್ದಾರೆ. ಇದರ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯುವ ಬಗ್ಗೆ ನೋಟೀಸ್ ಕೊಟ್ಟಿದ್ದೆ. ಹಿಂದೂಗಳಿಗೆ ಬೇರೆ ರಾಷ್ಟ್ರಗಳಲ್ಲಿ ರಕ್ಷಣೆ ಇಲ್ಲದಂತಾಗಿದೆ. ಇವತ್ತು ಹಿಂದೂಗಳಿಗೆ ರಕ್ಷಣೆ ಕೊಡತಕ್ಕ ರಾಷ್ಟ್ರಗಳೇ ಇಲ್ಲ. ಈ ವಿಚಾರವನ್ನು ಇಲ್ಲಿ ಚರ್ಚೆಮಾಡಬಹುದೇ ಎಂಬ ಅನುಮಾನ ಬರಬಹುದು ? ಸಿಲೋನ್‌ನಲ್ಲಿ ಇಂಥಾದ್ದೇ ಒಂದು ಕೆಲಸ ನಡೆದಾಗ ತಮಿಳುನಾಡು ಶಾಸನಸಭೆಯಲ್ಲಿ ಪ್ರಸ್ತಾಪ ಮಾಡಲಾಯಿತೆಂದು ಕೇಳಿದ್ದೇನೆ. ಬೈರೂತ್‌ನಲ್ಲಿ ಮಸೀದಿಯನ್ನು ನೆಲಸಮ ಮಾಡಿದಾಗ, ಆಂಧ್ರಪ್ರದೇಶದ ಶಾಸನ ಸಭೆಯಲ್ಲಿ ಚರ್ಚೆ ಮಾಡಲಾಯಿತೆಂದು ಕೇಳಿದ್ದೇನೆ. ೧೫ ಸಹಸ್ರ ಜನತೆಯ ಕೇಂದ್ರ ಯಾತ್ರಾಸ್ಥಳವನ್ನು ರಾತ್ರೋರಾತ್ರಿ ಹೊಡೆದು ಹಾಕಿ ನೆಲಸಮಮಾಡಿ ಭಾರತ ದೇಶಕ್ಕೆ ಅಗೌರವ ಸೂಚಿಸಿರತಕ್ಕ ಸಿಂಗಪುರ ಸರ್ಕಾರದ ಮೇಲೆ, ಕೇಂದ್ರ ಸರ್ಕಾರ ಪ್ರತಿಭಟನೆ ಮಾಡುವುದಕ್ಕೆ, ನಮ್ಮ ಸರ್ಕಾರ ಕೇಂದ್ರಸರ್ಕಾರದ ಮೇಲೆ ಒತ್ತಾಯ ತರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಲದೆ, ಹೊಡೆದು ಹಾಕಿರತಕ್ಕ ದೇವಸ್ಥಾನವನ್ನು ಸಿಂಗಪುರ ಸರ್ಕಾರವೇ ಪುನರ್‌ನಿರ್ಮಾಣ ಮಾಡಿಸಿಕೊಡುವಂತೆ ಒತ್ತಾಯ ಮಾಡ ಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಗಂಗಾಧರನ್‌ರವರು ಮಾತನಾಡುತ್ತಾ ಸಿಂಗಪುರದಲ್ಲಿ ಹಿಂದೂಗಳ ದೇವಾಲಯವನ್ನು ಹೊಡೆದು ಹಾಕಿ ನೆಲಸಮಮಾಡಿ ನಷ್ಟವನ್ನುಂಟು ಮಾಡಿ, ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದಾರೆಂದು ಹೇಳಿದರು. ಅಲ್ಲದೆ, ಆ ದೇವಸ್ಥಾನದ ಪುನರ್ ನಿರ್ಮಾಣವನ್ನು ಮತ್ತು ಅದರ ವಿರ್ಚಾವೆಚ್ಚವನ್ನು ಸಿಂಗಪುರ ಸರ್ಕಾರವೇ ಪಹಿಸಿಕೊಳ್ಳುವಂತೆ ಒತ್ತಾಯ ಮಾಡಬೇಕೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಒಂದು ದೇಶ ಮತ್ತೊಂದು ದೇಶದೊಡನೆ ವ್ಯವಹರಿಸ ಬೇಕಾಗುತ್ತದೆ. ಇದು ಕೇಂದ್ರ ಸರ್ಕಾರಕ್ಕೆ ಬಿಟ್ಟಿರತಕ್ಕಂಥ ವಿಚಾರವಾದರೂ ನಾವು ಕೂಡ ಪತ್ರ ಬರೆದು ತಿಳಿಸುತ್ತೇವೆ.

(iii) Discussion on the Interium Report of the Committee Constituted to go into the qustaion Formers qrievaces

ಶ್ರೀ ಡಿ. ಜಯದೇವರಾಜ ಆರಸ್.—ಮಾನ್ಯ ಕಂದಾಯ ಮಂತ್ರಿಗಳು ರೈತರಿಗೆ ಸಂಬಂಧಪಟ್ಟ ತಮ್ಮ ಇಂಟೇರಿಯಂ ರಿಪೋರ್ಟನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ತಿಳಿಸುತ್ತೇನೆ.

SRI M.C. BASAPPA.—Before the Hon Minister replies, I would state that there is a motion by the Leader of the Opposition to take up this for discussion.

ಶ್ರೀ ಬಿ. ಬಸವಲಿಂಗಪ್ಪ.—ರೈತರ ಸಮಸ್ಯೆಗಳ ಬಗ್ಗೆ ಎಕ್ಸ್‌ಪರ್ಟ್ ಕಮಿಟಿಯವರು ಕೊಟ್ಟಿರ ತಕ್ಕ ವರದಿ ಬಹಳ ಪ್ರಾಮುಖ್ಯವಾದುದು. ಕೊಟ್ಟಿರತಕ್ಕ ಭರವಸೆಗಳ ಬಗ್ಗೆ ನನಗೆ ಸಂತೋಷ ಮತ್ತು ಆಶ್ಚರ್ಯ ಎರಡೂ ಆಯಿತು. ಸಂತೋಷ ಏಕೆಂದರೆ, ರೈತರಿಗೆ ಏನಾದರೂ ಪರಿಹಾರ ಸಿಕ್ಕೀತು ಎನ್ನುವ ದೃಷ್ಟಿಯಿಂದ ಆಶ್ಚರ್ಯ ಎಂದರೆ ಏನು ಶಿಫಾರಸ್ಸು ಮಾಡಿದ್ದಾರೆ ಎನ್ನುವ ಬಗ್ಗೆ. ಇದರ ಬಗ್ಗೆ ಆರ್ಥಿಕ ತಜ್ಞರ ಅಭಿಪ್ರಾಯ ತೆಗೆದುಕೊಂಡಿದ್ದಾರೆಯೇ ? ಇಲ್ಲವೆ ? ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಏನು ಮಾಡಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರದ ಅನುಮತಿ ಸಿಕ್ಕಿದೆಯೆ ? ಕೇಂದ್ರ ಸರ್ಕಾರ ಸಾಲದ ಹೊರೆಯನ್ನು ಇಟ್ಟುಕೊಂಡು ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆಯೇ ? ಅಥವಾ ಇಲ್ಲವೇ ? ಇದಕ್ಕೆ ಮಾನ್ಯ ಅರ್ಥ ಮಂತ್ರಿಗಳು ಭಾಗಿಯಾಗಿಲ್ಲವೆಂದು ಕಾಣುತ್ತೆ ಮಾನ್ಯ ಬಂಗಾರಪ್ಪನವರು ಸಮಾಜ ವಾದಿಗಳು ಅವರ ಕೆಲಸ ಮಾಡಿದ್ದಾರೆ.

೧೦–೦೦ ಎ. ಎಂ.

ಅಧ್ಯಕ್ಷರೆ, ಇವೊತ್ತು ಅಭಿಪ್ರಾಯಗಳನ್ನು ಒಂದು ರಿಪೋರ್ಟ್‌ನಲ್ಲಿ ಇಟ್ಟಾಗ ಅದನ್ನು ನಾವು ಜಾರಿಗೆ ಕೊಡಲಿಕ್ಕೆ ಆಗುತ್ತದೆಯೇ ಇಲ್ಲವೇ ಎನ್ನುವುದನ್ನು ಅವರು ಯೋಚನೆ ಮಾಡಿರಲೇಬೇಕು. ಅಧಿವೇಶನ ಇವೊತ್ತೇ ಕೊನೇ ಇದೆ. ಅಧಿವೇಶನ ಕೊನೆಯಾದ ಮೇಲೆ ನೀವು ಏನು ನಿರ್ಣಯ ತೆಗೆದು ಕೊಳ್ಳುತ್ತೀರೋ. ಇವೊತ್ತು ಏನು ರಿಪೋರ್ಟ್ ಕೊಟ್ಟಿದ್ದಾರೆ ಇದು ಬಹಳ ಪ್ರಾಮುಖ್ಯವಾದುದು. ಇದರಿಂದ ಹಣಕಾಸಿನ ಮೇಲೆ ಪರಿಣಾಮವಾಗುತ್ತದೆ. ಇದರ ತರ್ಕ ಏನಿದೆ ಇದು ಬಹಳ ಆವಶ್ಯಕವಾಗಿರತಕ್ಕದ್ದು. ಆದುದರಿಂದ ಇದರ ಬಗ್ಗೆ ನಾವು ಮಾತನಾಡಲಿಕ್ಕೆ ಹೆಚ್ಚು ಸಮಯ ಕೊಡಬೇಕು ಅಂತ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳಾದ ಬಂಗಾರಪ್ಪನವರು ವ್ಯವಸಾಯಗಾರರ ದೃಷ್ಟಿಯಿಂದ ಅನೇಕ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಈ ಅಧಿವೇಶನ ಮುಗಿಯುವುದರೊಳಗೆ ಕೆಲವು ರಿಯಾಯಿತಿಗಳನ್ನು ಏನು ಕೊಡುತ್ತೇವೆ ಅವನ್ನು ತಿಳಿಸುತ್ತೇವೆ, ಇನ್ನು ಕೆಲವು ರಿಯಾಯಿತಿಗಳ ಬಗ್ಗೆ ಅವು ಮಂತ್ರಿಮಂಡಲದ ಮುಂದೆ ಹೋಗ ಬೇಕು ಎಂದು ಹೇಳಿದರು. Regarding support prices the State Government has to fight with the Government of India. The Agricultural Prices Commission has determined the support price of paddy as well as course grains ಇವೊತ್ತು ತೀರ್ಮಾನ ಮಾಡಿದ್ದರು, ರಾಜ್ಯಸರ್ಕಾರದವರು ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಪಡೆದು ಅಗ್ರಿಕಲ್ಚರ್ ಪ್ರೈಸಸ್ ಕಮಿಷನ್‌ನವರು ನಿಗದಿ ಮಾಡಿದ್ದಾರೆ. ಆದನ್ನು ಜಾರಿ ಮಾಡಿಲ್ಲ. The Hon'ble Minister said that they will fight for higher prices and they may do it. But what has already been determined by the Agricultural Prices Commission and approved by the Government of India, they are not making arrengements even to procure at that price. ಇದರಲ್ಲಿ ಡಿಸ್‌ಟ್ರಿಸ್ ಸೇಲ್ ಆಗುತ್ತಿದೆ ಅಂತ ನಾನು ಡಿಬೇಟ್‌ನಲ್ಲಿ ಹೇಳಿದ್ದೇನೆ. ಸಿವಿಲ್ ಸಪ್ಲೈಸ್ ಮಿನಿಸ್ಟರ್ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ. ಇದರಿಂದ ರೈತನಿಗೆ ಬಹಳ ತೊಂದರೆ ಯಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಒಂದು ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಈ ಒಂದು ಎಕ್ಸ್‌ಪರ್ಟ್ ಕಮಿಟಿ to go into the grievances of the farmers of the State. ಈ ಎಕ್ಸ್‌ಪರ್ಟ್ ಕಮಿಟಿಯನ್ನು ರಾಜ್ಯಸರ್ಕಾರದವರು ನೇಮಕ ಮಾಡಿದರು, ನಮ್ಮ ಆಸೆ ಏನಿತ್ತು ಅಂದರೆ ಈ ಫಾರ್‌ಮರ್ಸ್ ಅಜಿಟೇಷನ್ ಬರದೇ ಇದ್ದರೆ let me declare to this August House ಈ ಶಾಸನ ಸಭೆ ಮುಗಿದ ಮೇಲೆ ನಾವು ಕೆಲವು ವಿಷಯಗಳನ್ನು ತೀರ್ಮಾನ ಮಾಡುವುದು ಇತ್ತು. ಪ್ರಾಮಾಣಿಕತೆಯಾಗಿ ನಾವು ಏನು ವಿಚಾರ ಮಾಡಿದ್ದವು ಅಂದರೆ, ಬೆಳಿಗ್ಗೆ, ಸಾಯಂಕಾಲ, ರಾತ್ರಿ ತಡ ಆದರೂ ಚಿಂತೆಯಿಲ್ಲ ಎಂದು ಮಂತ್ರಿಮಂಡಲದ ಸಭೆಗಳನ್ನು ನಡೆಸುತ್ತಿದ್ದೆವು. ನಮ್ಮ ರಾಜ್ಯದಲ್ಲಿ ನೂರಕ್ಕೆ ಎಂಭತ್ತು ಭಾಗ ಜನ ರೈತರು ಏನಿದ್ದಾರೆ ಅವರಿಗೆ ಆಗಿರತಕ್ಕ ತೊಂದರೆಗಳನ್ನು ನಿವಾರಣೆ ಮಾಡುವ ದೃಷ್ಟಿಯಿಂದ, ಸರ್ಕಾರ ಅವರನ್ನು ಗಮನದಲ್ಲಿಟ್ಟುಕೊಂಡು ಕಾಲವನ್ನು ಖರ್ಚು ಮಾಡಿದ್ದೇವೆ. ನಾನು ನೆನ್ನೆಯ ದಿವಸ ಮುಖ್ಯ ಮಂತ್ರಿಗಳಿಗೆ, ಇದನ್ನು ಮಂತ್ರಿಯಾಗಿ ಕೊಟ್ಟಿಲ್ಲ, ನಾನು ಒಬ್ಬ ಆ ಸಮಿತಿಯ ಅಧ್ಯಕ್ಷ ನಾಗಿ ಕೊಟ್ಟಿದ್ದೇನೆ. ಆ ವಿಷಯವನ್ನು ನಾನು ಸದನದಲ್ಲಿ ಹೇಳಿದ್ದೇನೆ. ಆದರ ಬಗ್ಗೆ ಈ ಸದನದ ಎಲ್ಲ ಸದಸ್ಯರಿಗೆ ಒಂದು ಜಿಸ್ಟ್ ಮಾಡಿಸಿಕೊಡೋಣ. ಇವೊತ್ತು ರಿಪೋರ್ಟ್ ತಯಾರಾಗಿರುವುದು. ಸರ್ಕಾರದ ವಶದಲ್ಲಿದೆ, ಸರ್ಕಾರ ಏನು ತೀರ್ಮಾನ ಮಾಡುತ್ತದೆ ಅದು ಜನತೆಯ ಗಮನದಲ್ಲಿರಲಿ. ರೈತರಿಗೆ ಉಪಯೋಗವಾಗಬೇಕು ಅಂತ ಪುನಃ ರೆಕಮಂಡೇಷನ್ಸ್, ಏನಿದೆ ಅದನ್ನೆಲ್ಲಾ ಭಟ್ಟಿ ಇಳಿಸಿ, ಕೆಲವು ಜಿಸ್ಟ್ ಹಾಕಿಸಿ, ಈ ಸದನದ ಹಾಗೂ ಮೇಲ್ಮನೆಯ ಸದಸ್ಯರಿಗೂ ಕೊಡುವ ವ್ಯವಸ್ಥೆಯನ್ನು ಮಾಡಿಸುತ್ತೇವೆ. ನಾನು ಈಗ ಪರದಿಯನ್ನು ಚರ್ಚೆ ಮಾಡಲಿಕ್ಕೆ ಅಡ್ಡಿ ಬರಬೇಕು ಅಂತ ಇಲ್ಲ. The Comm'ttee is in a position to defend itself why all these rates

have been arrived at in respect of so many items of the crops raised in each year by the farmers of the State. ನಾವು ರೀಸನ್‌ಗಳನ್ನೆಲ್ಲಾ ರೆಡಿ ಮಾಡಿಸಿದ್ದೇವೆ. ಕೆಲವು ಕಡೆಯಿಂದ ವರದಿ ಬರಬೇಕಾಗುತ್ತದೆ. ೧೯ ಜಿಲ್ಲೆಗಳಿಗೆ ಹೋಗಿ ಬರಬೇಕು. ಕೋಜೆಂಟ್ ಆರ್ ಸೈನ್‌ಟಿಫಿಕ್ ರೀಜನ್ಸ್ ಕೊಡಬೇಕು. ಅಂತಿಮ ವರದಿ ಸರ್ಕಾರಕ್ಕೆ ತಿಳಿಸುತ್ತೇವೆಂದು ಇಂಟೆರಿಮ್ ರಿಪೋರ್ಟ್‌ನಲ್ಲಿ ತಿಳಿಸಿದ್ದೇವೆ. ಇನ್ನು ಮಾನ್ಯ ವಿರೋಧ ಪಕ್ಷದ ಉಪನಾಯಕರು ರೈತ ವರ್ಗದಿಂದ ಸಂತೋಷ, ಹಣಕಾಸಿನ ದೃಷ್ಟಿಯಿಂದ ಆಶ್ಚರ್ಯ ಅಂತ ಹೇಳಿದರು ಇವೊತ್ತು ೆರಂ ಪರ್‌ಸೆಂಟ್ ಇರತಕ್ಕ ರೈತ ವರ್ಗಕ್ಕೆ ಅನುಕೂಲವಾಗುವ ವಿಷಯ ಅಂತ ಒಪ್ಪಿದೀರಿ, ಆದಕ್ಕಾಗಿ ನಾನು ಅಭಿನಂದಿಸುತ್ತೇನೆ. ಇನ್ನು ರಾಜ್ಯದಲ್ಲಿ ಹಣಕಾಸಿನ ದೃಷ್ಟಿಯಿಂದ ಪರಿಸ್ಥಿತಿ ಏನಾಗಬಹುದು ಅಂದರೆ, What will be the impact on the State's exchequer if all these rates arrived at by the committee or accepted by the Government? As a responsible Member of this August House, the Hon'ble Member has got a right to advance that kind of argument. ರೈತರ ದೃಷ್ಟಿಯಿಂದ..... I see much force in it I think you will agree with this view. ಈಗ ನಮ್ಮ ಶಿಫಾರಸ್ಸುಗಳನ್ನು ಮಾತ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಈ ಸದನ ಹೇಳುವುದರಲ್ಲಿ ಕೆಲವು ವಿಷಯಗಳ ಬಗ್ಗೆ ಅಂತಿಮ ತೀರ್ಮಾನ ತಿಳಿಸುತ್ತೇವೆಂದು ಹೇಳಿದ್ದಾರೆ. ಈ ಸದನ ಮುಗಿದ ತಕ್ಷಣ ಏನೂ ಹೇಳದೆ ನಿಮ್ಮನ್ನು ಹಾಗೆ ಕಳುಹಿಸಬೇಕು ಅಂತ ಆಸೆ ಸರ್ಕಾರಕ್ಕೆ ಇಲ್ಲ. ನೀವು ಸದನದಿಂದ ಹೋಗುವುದರೊಳಗೆ ಕೆಲವು ಶಿಫಾರಸುಗಳನ್ನು ಪ್ರಕಟ ಮಾಡಬೇಕು ಅಂತ ಸರ್ಕಾರದ ಆಸೆ ಇದೆ. ರೈತರ ಚಳುವಳಿಯಿಂದ ಹೀಗೆ ಹೇಳುತ್ತೀರಾ ಅಂತ ತಾವು ವ್ಯಾಖ್ಯಾನ ಮಾಡಬಹುದು. ಆ ಕಾರಣ ಈಗ ಬೇಡ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವ ಹಾಗೆ, ಈ ಸದನ ಏಳುವುದರೊಳಗೆ ಕೆಲವು ವಿಷಯಗಳನ್ನು ಪ್ರಕಟ ಮಾಡುತ್ತಾರೆ. ಇದರ ಬಗ್ಗೆ ಹಣಕಾಸಿನ ಸಚಿವರೂ ಕೂಡ ಇವೊತ್ತಿನ ದಿವಸ ಸಾಯಂಕಾಲದೊಳಗೆ ಸರ್ಕಾರದ ಶಕ್ತಿ, ವ್ಯಾಪ್ತಿಯಲ್ಲಿ ಬರತಕ್ಕ ಕೆಲವು ವಿಷಯಗಳು ಏನಿವೆ ಅವನ್ನು ಪ್ರಕಟ ಮಾಡುತ್ತಾರೆಂದು ಹೇಳುತ್ತೇನೆ. ಇವೊತ್ತು ನಮ್ಮ ಶಿಫಾರಸ್ಸುಗಳು ಏನಿವೆ ಅವುಗಳನ್ನು ಸರ್ಕಾರ ಪರಿಶೀಲನೆ ಮಾಡಬೇಕಾಗುತ್ತದೆ. ಸಮಿತಿಯ ಸಂಪೂರ್ಣ ವರದಿಯನ್ನು ಅಮೂಲಾಗ್ರವಾಗಿ ಮಂತ್ರಿಮಂಡಲದಲ್ಲಿ ಚರ್ಚೆ ಮಾಡಿದ ಮೇಲೆ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಆ ವಿಷಯವನ್ನು ಸರ್ಕಾರಕ್ಕೆ ಬಿಡಿ ಅಂತ ಹೇಳಿದ್ದೇವೆ. ಈಗ ಮಾನ್ಯ ಮುಖ್ಯ ಮಂತ್ರಿಗಳಿಗೆ ವರದಿಯನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಚರ್ಚೆ ಮಾಡಿ ಉತ್ತರ ಕೊಡಲಿಕ್ಕೆ ಸರ್ಕಾರಕ್ಕೆ ಕಾಲಾವಕಾಶ ಸಿಕ್ಕುವುದಿಲ್ಲ Since to-day is the last day of the session sitting. ಆದ ದರಿಂದ ಆಗಲಾರದು. What I suggest ಮುಂದಿನ ಸಾರಿ ಬಂದಾಗ ತಾವು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ನನ್ನ ಅಭ್ಯಂತರವಿಲ್ಲ. It is left to the August House and the Hon'ble Speaker. But I honestly feel that let this report be discussed if Members so desire to discuss this in the next sitting of the Assembly. ಮುಂದಿನ ಸಾರಿ ಕುಳಿತಾಗ ಇದನ್ನು ತೆಗೆದುಕೊಳ್ಳೋಣ. I have placed the Card on the table of the House. Now, the ball is in your court.

ಶ್ರೀ ಬಿ. ಬಸವಲಿಂಗಪ್ಪ.—ತಾವು ಹೇಳಿದ ಮಾತನ್ನು ಕೇಳಿದ್ದೇವೆ. ಇನ್ನೊಂದು ವಿಷಯ ಏನು ಹೇಳಿದ್ದಾರೆ, ಅಂದರೆ ಸರ್ಕಾರ ಪರಿಶೀಲನೆ ಮಾಡಿಲ್ಲ, ನಾವು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ ಅಂತ ಹೇಳಿದ್ದಾರೆ. ಮತ್ತೆ ಈ ಸದನ ಬಿಡುವ ಮುಂಚೆ ಕೆಲವು ಶಿಫಾರಸ್ಸುಗಳನ್ನು ಪ್ರಕಟ ಮಾಡುತ್ತೇವೆ ಎಂದು ಏನು ಹೇಳಿದರು ಆದರ ಬಗ್ಗೆ ನನ್ನ ಅಭ್ಯಂತರವಿಲ್ಲ ಅವಸರ ಅವಸರವಾಗಿ ಏನು ಈ ವರದಿಯನ್ನು ಇಟ್ಟಿದ್ದಾರೆ, ಒಂದು ಸಾರಿ ಆ ವರದಿಯನ್ನು ಸದನದ ಮುಂದೆ ಇಟ್ಟಮೇಲೆ ಅದು ಸದನದ ಸ್ವತ್ತು ಆಯಿತು.

ಶ್ರೀ ಎಸ್. ಬಂಗಾರಪ್ಪ.—ಇಲ್ಲ ಅಂತ ಹೇಳಲಿಲ್ಲವಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಸರ್ಕಾರ ಹೇಗೂ ತೀರ್ಮಾನ ತೆಗೆದುಕೊಳ್ಳುತ್ತದೆ. ಆದರೆ ಅದರ ಬಗ್ಗೆ ಮಾನ್ಯ ಸದಸ್ಯರಿಗೇನಾದರೂ ಸಮಸ್ಯೆಗಳು ಇದ್ದರೆ ಅದನ್ನೂ ಕೂಡ ಇಲ್ಲಿ ತರ್ಕ ಮಾಡುವುದರಿಂದ ಅನುಕೂಲವಾಗುತ್ತದೆ. ಇದು ಬಹಳ ಮುಖ್ಯ ಕೂಡ ಹೌದು. ಆದರಿಂದ ನಿಮಗೂ ಒಳ್ಳೆಯದಾಗುತ್ತದೆ. ಈಗ ತಾವು ಏನು ವರದಿಯನ್ನು ಸದನದ ಮುಂದೆ ಇಟ್ಟಿದ್ದೀರಿ, ಅದು ಈ ಸದನದ ಸ್ವತಾಗುತ್ತದೆ. ಆದರ ಬಗ್ಗೆ ತರ್ಕ ಮಾಡಬೇಕಾಗುತ್ತದೆ. ಆ ಸಮಯದಲ್ಲಿ ಮಾನ್ಯ ಸದಸ್ಯರು ತಮ್ಮ ತಮ್ಮ ಸಲಹೆಗಳೇನಾದರೂ ಇದ್ದರೆ ಹೇಳುತ್ತಾರೆ. ಅದನ್ನು ದಯವಾಡಿ ಕೇಳಿ. ಅವಸರ ಅವಸರವಾಗಿ ವರದಿಯನ್ನು ಇಟ್ಟಿರುತ್ತೀರಿ. ತಾವು ಬೇಸರ ಪಟ್ಟುಕೊಳ್ಳಬೇಡಿ. ಅವಸರ ಅವಸರವಾಗಿ ಇದರ ಬಗ್ಗೆ ನಿರ್ಣಯ ತೆಗೆದುಕೊಂಡರೆ ಅದರಿಂದ ತೊಂದರೆಯಾಗುತ್ತದೆ. ನೀವು ಆಮೇಲೆ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತೀರಿ. ದಯವಾಡಿ ನಮ್ಮ ಮಾತನ್ನು ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಅದು ತಮ್ಮ ಅಭಿಪ್ರಾಯ. ಹಾಗೇ ಕೆಲವು ವಿಷಯಗಳ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ. ಇದರ ಬಗ್ಗೆ ಹಣಕಾಸಿನ ಸಚಿವರು ಮತ್ತು ನಾವುಗಳೆಲ್ಲರೂ ಸೇರಿ ಮಾತನಾಡಿ ಕೆಲವು ವಿಷಯಗಳನ್ನು ಇವತ್ತೇ ಪ್ರಕಟಣೆ ಮಾಡುತ್ತೇವೆಂದು ಆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದಕ್ಕಾಗಿ ನಾವು ಈ ತೀರ್ಮಾನವನ್ನು ತೆಗೆದುಕೊಂಡರೆ ಅದಕ್ಕೆ ತಾವು ಅವಸರ ಅವಸರವಾಗಿ ತೆಗೆದುಕೊಂಡಂತಹ ತೀರ್ಮಾನ ಎಂಬುದಾಗಿ ಅಭಿಪ್ರಾಯ ಪಟ್ಟರೆ ಹೇಗೆ ? ಹಾಗಾದರೆ, ತಮ್ಮ ಅಭಿಪ್ರಾಯದಂತೆ ಈ ವಿಷಯವನ್ನು ಪ್ರಕಟಣೆ ಮಾಡಬೇಡವೇ ? ದಯವಾಡಿ ತಾವು ಹೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಪ್ರಕಟಣೆ ಮಾಡಬಾರದು ಅಂತ ನಾನು ಹೇಳಿದ್ದೇನೆಯೇ ? ಇಲ್ಲ. ಪ್ರಕಟಣೆ ಮಾಡುವುದಕ್ಕೆ ನನ್ನ ಆಭ್ಯಂತರವಿಲ್ಲ. ಆದರೆ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಳ್ಳಬೇಡಿ ಅಂತ ಹೇಳುತ್ತಿದ್ದೇನೆ. ಆದ್ದರಿಂದ ಮಾನ್ಯ ಸದಸ್ಯರ ಸಲಹೆಯನ್ನೂ ತೆಗೆದುಕೊಳ್ಳಿ ಅಂತ ನಾನು ನಿಮಗೆ ಹೇಳಿದರೆ, ನಮ್ಮನ್ನೇ ಇಕ್ಕಟ್ಟಿಗೆ ಸಿಕ್ಕಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಲ್ಲಾ. ಆ ಕೆಲಸ ನಿಮ್ಮ ಕೈಯ್ಯಲ್ಲಿ ಆಗುವುದೇ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳೂ ಇದ್ದಾರೆ. ಆದ್ದರಿಂದ ಈ ಒಂದು ವಿಚಾರವನ್ನು ಇವತ್ತು ಇಲ್ಲಿ ಚರ್ಚೆ ಮಾಡುವುದು ಬಹಳ ಅವಶ್ಯಕ ಇದೆ ಎಂಬುದಾಗಿ ನಾನು ಹೇಳುತ್ತಿದ್ದೇನೆ. ನಾನು ಹೇಳುವುದಕ್ಕಾಗದಿದ್ದರೂ, ಮಾನ್ಯ ಸದಸ್ಯರಲ್ಲಿ ಬಹಳಷ್ಟು ಜನ ರೈತ ಪ್ರತಿನಿಧಿಗಳಿದ್ದಾರೆ, ಅವರು ತಮ್ಮ ಸಲಹೆಗಳನ್ನು ಕೊಡುತ್ತಾರೆ, ತಾವು ದಯವಾಡಿ ಅವರ ಸಲಹೆಗಳನ್ನು ತೆಗೆದುಕೊಳ್ಳಿ.

ಶ್ರೀ ಎಸ್ ಬಂಗಾರಪ್ಪ.—ಇದು ಸರ್ಕಾರ ರಚನೆ ಮಾಡಿರತಕ್ಕಂತಹ ಸಮಿತಿ. ಆ ಸಮಿತಿ ತನ್ನ ಸಂಪೂರ್ಣ ವರದಿಯನ್ನು ಸರ್ಕಾರಕ್ಕೆ ಇನ್ನೂ ಸಬ್‌ಮಿಟ್ ಮಾಡಿಲ್ಲ. ಇಂಟೀರಿಯಮ್ ರಿಪೋರ್ಟನ್ನು ಮಾತ್ರ ಕೊಟ್ಟಿದೆ ಮಾನ್ಯ ಸದಸ್ಯರಿಗೆ ಅನುಕೂಲವಾಗಬೇಕೆಂಬ ಉದ್ದೇಶದಿಂದ ಆ ಸಮಿತಿಯ ಇಂಟೀರಿಯಂ ರಿಪೋರ್ಟಿನ ವರದಿಯ ಜಿಸ್ಟ್‌ನ್ನು ಕೊಟ್ಟಿದ್ದೇನೆ ಅಷ್ಟೆ. I have not placed the entire report on the table of the House. I have placed the gist of the report. It is not a report. Therefore, it doesn't become the property of this House. This is for your kind information. ಇನ್ನೂ ಪೂರ್ಣ ವರದಿಯನ್ನು ಸರ್ಕಾರಕ್ಕೆ ಕೊಟ್ಟಿಲ್ಲ. ಆದ್ದರಿಂದ ನಾನು ಮೊದಲೇ ಹೇಳಿದ ಪ್ರಕಾರ ಇದು ತಾತ್ಕಾಲಿಕ ವರದಿಯ ಜಿಸ್ಟ್ ಆಗಿರುವುದರಿಂದ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಮಾನ್ಯ ವಿರೋಧ ಪಕ್ಷದ ಉಪನಾಯಕರು ಒತ್ತಾಯ ಮಾಡುವುದು ಬೇಡ ಎಂಬುದಾಗಿ ನಾನು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

SRI B. BASAVALINGAPPA.—Even the part of the report will also be considered as the property of this House.

SRI S. BANGARAPPA.—I have already submitted it is not a final report. ನಾನು ಪುನಃ ಪುನಃ ಹೇಳುತ್ತಿದ್ದೇನೆ. ತಾತ್ಕಾಲಿಕ ವರದಿಯ ಜಿಸ್ಟ್‌ನ್ನು ಕೊಟ್ಟಿದ್ದೇನೆ. ಪೂರ್ಣ ವರದಿಯನ್ನು ಕೊಟ್ಟಿಲ್ಲ. I have just placed the gist of the recommendations of the Committee for the information of the hon. Members.

This I have done with good intention and with intention that the hon. Members can apprise the farmers the steps taken by the Government to redress their grievances. ಆದ್ದರಿಂದ ಇದು ಚರ್ಚೆ ಮಾಡತಕ್ಕಂತಹ ವಿಷಯ ಆಗಲಾರದು.

ಶ್ರೀ ಎಚ್. ಡಿ. ಚೌಡಯ್ಯ.—ಅಗ್ರಿಕಲ್ಚರಲ್ ಪ್ರೈಸ್ ಕಮಿಷನ್‌ನವರು ಕೆಲವು ದರಗಳನ್ನು ನಿಗದಿ ಮಾಡಿದ್ದಾರೆ, ಅದರ ಬಗ್ಗೆ ಯಾದರೂ ನಾವು ಚರ್ಚೆ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಅದನ್ನು ಬೇಕಾದರೆ ಸಭೆಗೆ ಸಪ್ಲೈ ಮಾಡುತ್ತೇನೆ. ಮತ್ತೆ ರಾಜ್ಯ ಸರ್ಕಾರದವರು ಕೂಡ ಆ ರೀತಿಯಲ್ಲಿ ಪರ್ಚೇಸ್ ಮಾಡತಕ್ಕಂತಹ ವ್ಯವಸ್ಥೆಯನ್ನು ಮಾಡಿದೆ. The matter is under consideration of the Government. We have already started consulting the Government of India in this regard. I will take up with them the question of giving support price to some of these products.

†ಶ್ರೀ ಎಚ್.ಡಿ. ಚೌಡಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ವ್ಯವಸಾಯ ಮಂತ್ರಿಗಳು ಈಗ ನಮ್ಮ ಮುಂದೆ ತಾತ್ಕಾಲಿಕ ವರದಿಯ ಜಿಸ್ಟ್‌ನ್ನು ಇಟ್ಟಿದ್ದೇವೆ ಅಂತ ಹೇಳಿದ್ದಾರೆ. ಈಗ ಮಾನ್ಯ ವ್ಯವಸಾಯ ಮಂತ್ರಿಗಳು ಹೇಳಿಕೆಯನ್ನು ಮಾಡಿದ್ದಾರೆ. ನಾವು ರೈತರ ಪ್ರತಿನಿಧಿಗಳಾಗಿದ್ದೇವೆ, ಹಾಗೂ ಸ್ವತ: ರೈತರಾಗಿದ್ದೇವೆ. ನಮಗೆ ಬೇಕಾದುದು ಕೆಲವು ಪರಿಹಾರ. ಈಗ ಮಾನ್ಯ ಮಂತ್ರಿಗಳು ಇದು ತಾತ್ಕಾಲಿಕ ವರದಿಯ ಜಿಸ್ಟ್, ಸರ್ಕಾರ ತೀವ್ರವಾಗಿ ಇದನ್ನು ಪರಿಶೀಲನೆ ಮಾಡಿ ತೀರ್ಮಾನ ತೆಗೆದು ಕೊಳ್ಳಬೇಕಾಗುತ್ತದೆಂದು ಹೇಳಿದ್ದಾರೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ನಾವು ಸರ್ಕಾರವನ್ನು ಕೇಳಬೇಕಾಗುತ್ತದೆ. ಆದರೆ ಯಾವುದೇ ಒಂದು ಅಂತಿಮವಾದ ವರದಿಯನ್ನು ಸಭೆಯ ಮುಂದೆ ಇಟ್ಟಿಲ್ಲ. ಈ ಮಧ್ಯೆ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಇಟ್ಟಿರತಕ್ಕಂಥ ತಾತ್ಕಾಲಿಕ ವರದಿಯು ಏನಿದೆ ಅದರಿಂದ ಆಗತಕ್ಕಂತಹ ಇಂಪ್ಲಿಮೆಂಟೇಷನ್ ಏನು ಎನ್ನತಕ್ಕಂತಹದ್ದರ ಬಗ್ಗೆ ಪೂರ್ವ-ಭಾವಿಯಾಗಿ ಚರ್ಚೆ ಮಾಡತಕ್ಕಂತಹದ್ದು ಸೂಕ್ತ. ೨೫ ಜನ ಕುಳಿತು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ನಾವು ಇಲ್ಲಿ ಶೇಕಡ ೮೦ ರಷ್ಟು ಭಾಗ ರೈತ ಪ್ರತಿನಿಧಿಗಳಿದ್ದೇವೆ. ನೂರಾರು ಜನ ಮಾನ್ಯ ಸದಸ್ಯರು ಈ ಸಭೆಯಲ್ಲಿದ್ದೇವೆ. ದಯವಾಡಿ ಮಾನ್ಯ ಮುಖ್ಯ ಮಂತ್ರಿಗಳೂ ಇಲ್ಲೇ ಇದ್ದಾರೆ ಅವರು ಇಲ್ಲೇ ಇರುವುದರಿಂದ ಕೆಲವು ವಿಚಾರಗಳನ್ನು ಅವರ ಗಮನಕ್ಕೆ ತರಬೇಕಾಗಿದೆ. ಆದುದರಿಂದ ಕೊನೆಯಪಕ್ಷ ಒಂದು ಗಂಟೆಯಾದರೂ ಇದರ ಬಗ್ಗೆ ಚರ್ಚೆ ಮಾಡೋಣ. ಇದಕ್ಕೆ ತಾವು ಅವಕಾಶ ಮಾಡಿಕೊಡ ಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಎ.ಜಿ. ಕೊಡಗಿ —ಈಗ ಮಾನ್ಯ ಕಂದಾಯ ಮಂತ್ರಿಗಳು ಪ್ರಮುಖವಾದಂತಹ ಕೆಲವು ವಿಚಾರಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ರೈತರಿಗೆ ಒದಗಿಸತಕ್ಕಂತಹ ಸೌಲಭ್ಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಅವರ ಉದ್ದೇಶ ಒಳ್ಳೆಯದಿದೆ. ರೈತರ ಪ್ರತಿನಿಧಿಗಳಾಗಿರತಕ್ಕ ನಾವು ಈ ಸದನವನ್ನು ಮುಗಿಸಿಕೊಂಡು ಊರಿಗೆ ಹೋದಾಗ, ನಾವು ಕೆಲವು ಮಹತ್ವಪೂರ್ಣವಾದಂತಹ ನಿರ್ಣಯಗಳನ್ನು ತೆಗೆದುಕೊಂಡು ಹೋಗಿ ರೈತರಿಗೆ ಹೇಳುವುದರ ಮುಖಾಂತರ ಅವರ ಗಮನಕ್ಕೆ ತರಬೇಕೆಂದು ನಿರ್ಣಯಗಳನ್ನು ಹೇಳಿದ್ದಾರೆ. ಕೇವಲ ಈ ಒಂದು ಸಾಂಪ್ರದಾಯಿಕ ವರದಿಯನ್ನು ಹಿಡಿದುಕೊಂಡು ಹೋಗಿ ನಾವು ಅವರನ್ನು ತೃಪ್ತಿ ಪಡಿಸುವುದಕ್ಕೆ ಆಗುತ್ತದೆಯೆ ? ಇದಕ್ಕೂ ಮಾನ್ಯ ಕಂದಾಯಮಂತ್ರಿಗಳು ಯೋಚನೆ ಮಾಡಬೇಕಾಗುತ್ತದೆ. ಕೇವಲ ವರದಿಯನ್ನು ಹಿಡಿದುಕೊಂಡು ರೈತರನ್ನು ತೃಪ್ತಿಪಡಿಸುವುದಕ್ಕಾಗುವುದಿಲ್ಲ. ಸರ್ಕಾರ ಈ ವರದಿಯನ್ನು ಒಪ್ಪಿದೆಯೆಂದರೆ, ಅದರಲ್ಲಿರುವ ಸೌಕರ್ಯಗಳನ್ನು ತಲುಪಿಸುತ್ತದೆಯೆಂದು ಹೇಳುವುದಾದರೆ. ನಾವು ರೈತರನ್ನು ತೃಪ್ತಿಪಡಿಸುವುದಕ್ಕೆ ಸಾಧ್ಯವಾಗುತ್ತದೆ ಈ ಒಂದು ವರದಿಯಲ್ಲಿ ಬೇರೆ ಬೇರೆ ವಿಷಯಗಳ ಬಗ್ಗೆ ಎಂದರೆ ಭತ್ತವನ್ನು ೧೫೦ ರೂಪಾಯಿಗೆ ತೆಗೆದುಕೊಳ್ಳುವ ಬಗ್ಗೆ ಐ.ಪಿ. ಸೆಟ್‌ಗಳ ಬಗ್ಗೆ ಏನು ಹೇಳಿದ್ದೀರಿ, ಇದಕ್ಕೆಲ್ಲಾ ಸರ್ಕಾರ ಒಪ್ಪಿಗೆ ಕೊಟ್ಟರೆ ನಾವು ರೈತರನ್ನು ತೃಪ್ತಿಪಡಿಸ ವುದಕ್ಕಾಗುತ್ತದೆ. ಆದರೆ ಈ ಸಮಿತಿ ಸರ್ಕಾರಕ್ಕೇನು ಈ ವರದಿಯನ್ನು ಕೊಟ್ಟಿದೆ ಅದರಿಂದ ರೈತರನ್ನು ತೃಪ್ತಿಪಡಿಸುವುದಕ್ಕಾಗುವುದಿಲ್ಲ. ಇದರಲ್ಲಿ ಚರ್ಚೆ ಮಾಡುವ ವಿಷಯ ಒಂದಾದರೆ, ಇದರಲ್ಲಿ ಸರ್ಕಾರ ಯಾವ ಯಾವ ಬಾಬುಗಳನ್ನು ಒಪ್ಪಿಕೊಂಡಿದೆ ಎಂಬುದು ಮುಖ್ಯವಾಗಿ ಬೇಕಾಗುತ್ತದೆ. ಇಲ್ಲಿ ವರದಿ

† Indicates that remarks or speeches have not been revised by the member concerned.

ಮುಖ್ಯ ಅಲ್ಲ. ಸರ್ಕಾರ ಯಾವುದನ್ನು ಒಪ್ಪಿದೆ ಎಂಬುದು ಮುಖ್ಯ. ಆದ್ದರಿಂದ ಸಮಿತಿ ವರದಿಯಲ್ಲಿ ಏನೊಂದು ದರವನ್ನು ನಿಗದಿಪಡಿಸಿದೆ ಅದನ್ನ ಒಪ್ಪುವುದಕ್ಕೆ ಸರ್ಕಾರ ಸಿದ್ಧವಿದೆಯೇ? ಪಂಪುಸೆಟ್ಟುಗಳಿಗೆ ರಿಯಾಯಿತಿ ಕೊಡುವುದಕ್ಕೆ ಸರ್ಕಾರ ಸಿದ್ಧವಿದೆಯೇ? ಬರೀ ಈ ಒಂದು ಜಿಸ್ಟ್‌ನಿಂದ ರೈತರನ್ನು ತೃಪ್ತಿ ಪಡಿಸುವುದಕ್ಕಾಗುವುದಿಲ್ಲ.

MR. SPEAKER.—It is not a report Mr. Kodagi. It is just a first stage of recommendation. There is no exhaustive report.

ಶ್ರೀ ಎ.ಜಿ. ಕೊಡಗಿ.—ಸರ್ಕಾರ ಈ ಒಂದು ವರದಿಗೆ ಒಪ್ಪಿಗೆಯನ್ನು ಕೊಟ್ಟರೆ ನಾವು ರೈತರನ್ನು ತೃಪ್ತಿಪಡಿಸುವುದಕ್ಕಾಗುತ್ತದೆಂದು ಈ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಕೆಲವು ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಆ ಬಗ್ಗೆ ಚರ್ಚೆ ಮಾಡಿ ಯಾವುದಾದರೂ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆಂದು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಎಸ್ ಬಂಗಾರಪ್ಪ.—ಈ ಒಂದು ಶಿಫಾರಸನ್ನು ನಾನು ಸಮಿತಿಯ ಉದ್ದೇಶಗಳು ಏನೆಂಬುದು ಸದನದ ಸದಸ್ಯರಿಗೆ ತಿಳಿಯಲೆಂದು ನಾನು ಸಭೆಯ ಮುಂದೆ ಇಟ್ಟಿದ್ದೇನೆ. ಇದನ್ನೂ ಸಹಾ ಸದನದ ಮುಂದೆ ಸಲ್ಲಿಸದೇ ಇರಬಹುದಿತ್ತು. ಇದು ಪೂರ್ಣ ವರದಿಯೇನಲ್ಲ. Since there is no report placed on the table of the House, no question of discussing something arises. ಆದುದರಿಂದ ಈ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಮಾನ್ಯ ಕೊಡಗಿಯವರು ಏನ್ನೊಂದು ಉದ್ದೇಶವನ್ನು ಇಟ್ಟುಕೊಂಡು ಹೇಳಿದರು ಅದನ್ನು ನಾನು ಒಪ್ಪುತ್ತೇನೆ. ಈ ಒಂದು ರೆಕಮೆಂಡೇಷನ್ನನ್ನು ತೆಗೆದುಕೊಂಡು ಹೋಗಿ ರೈತರನ್ನು ತೃಪ್ತಿಪಡಿಸುವುದಕ್ಕಾಗುವುದಿಲ್ಲ. ಈ ಬಗ್ಗೆ ಸರ್ಕಾರದ ತೀರ್ಮಾನ ಏನು ಎಂಬುದಾಗಿ ಅವರು ಕೇಳಿದ್ದಾರೆ. ಆದರಲ್ಲಿ ತುಂಬಾ ಅರ್ಥವಿದೆ. ಎಲ್ಲಾ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಸಮಿತಿ ವರದಿಯನ್ನು ತಯಾರಿಸುತ್ತದೆ. ಇಲ್ಲಿ ಕೆಲವು ಪಾಲಿಸಿ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರದವರ ಜೊತೆಯಲ್ಲಿ ಸಹಾ ಕುಳಿತು ಮಾತನಾಡಬೇಕಾಗುತ್ತದೆ. ಕೆಲವು ವಿಷಯಗಳ ಬಗ್ಗೆ ಸ್ವಲ್ಪ ಕಾಲದಲ್ಲಿಯೇ ಸರ್ಕಾರ ತೀರ್ಮಾನ ತೆಗೆದುಕೊಂಡು ಅವುಗಳನ್ನು ಸಧ್ಯದಲ್ಲಿಯೇ ಪ್ರಕಟ ಮಾಡಲು ಸಿದ್ಧವಿದೆ. ಈ ಬಗ್ಗೆ ಮಾನ್ಯ ಸದಸ್ಯರಿಗೆ ಎಷ್ಟು ಕುತೂಹಲ ಇದೆ ಅಷ್ಟೇ ಕುತೂಹಲ ಸರ್ಕಾರಕ್ಕೂ ಇದೆ. ರೈತರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಬೇಕು ಎನ್ನುವ ಆಸಕ್ತಿಯನ್ನು ಇಟ್ಟುಕೊಂಡೇ ಸಮಿತಿ ತನ್ನ ಪೂರ್ಣ ವರದಿಯನ್ನು ಸರ್ಕಾರದ ಮುಂದೆ ಇಡುವುದು ಇದೆ. ಪೂರ್ಣ ವರದಿಯನ್ನು ಸರ್ಕಾರದ ಮುಂದೆ ಇಟ್ಟಮೇಲೆ ಅದರ ಬಗ್ಗೆ ವಿಚಾರ ಮಾಡಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ.

ಶ್ರೀ ಡಿ ಜಯದೇವರಾಜ ಅರಸ್.—ಸರ್ಕಾರದವರು ಈ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುವುದಕ್ಕೆ ನಿಧಾನವಾದರೆ ಏನು ಪ್ರಯೋಜನ? ಈ ಬಗ್ಗೆ ಇನ್ನು ೬ ತಿಂಗಳು ಆದರೆ ಏನು ಪ್ರಯೋಜನ? ಇವತ್ತು ಈ ಸದನದಲ್ಲಿ ನೂರಾರು ರೈತರ ಪ್ರತಿನಿಧಿಗಳು ಇದ್ದಾರೆ. ಆ ರೈತರಿಂದ ಓಟು ಪಡೆದು ಬಂದ ಸದಸ್ಯರುಗಳು ನಾವು. ಆ ರೈತನು ಉಪಯೋಗಿಸತಕ್ಕ ಒಂದು ಗುಳಿದ ಬೆಲೆ ೨೦ ರೂಪಾಯಿಯಾಗಿದೆ. ಆತನಿಗೆ ಗೊಬ್ಬರ ಸಿಗುತ್ತಲೇ ಇಲ್ಲ. ಈ ಬಗ್ಗೆ ಮಾತನಾಡುವುದಕ್ಕೆ ತಾವು ಇಲ್ಲಿ ಸ್ವಲ್ಪ ಅವಕಾಶವನ್ನು ಕೊಡಬೇಕಾಗುತ್ತದೆ. ಈ ಬಗ್ಗೆ ತ್ವರಿತವಾದ ಕಾರ್ಯಕ್ರಮ ಕೈಗೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಇನ್ನು ೬ ತಿಂಗಳಾದ ಮೇಲೆ ಬಂದರೆ ಇದು ಸುಮ್ಮನೆ ಒಂದು ವರದಿಯಾಗುತ್ತದೆ. ಅದನ್ನು ಜನರಿಗೆ ಹೇಳುವಹಾಗಿಲ್ಲ. ಏನು ಮಾಡಿದ್ದಾರೆಂಬುದು ಜನರಿಗೆ ಗೊತ್ತಾಗುವುದಿಲ್ಲ. ಈ ರೀತಿ ನಮ್ಮನ್ನು ಮಧ್ಯಕ್ಕೆ ಸಿಕ್ಕಿಹಾಕಿ ಇನ್ನೊಂದು ಸಾರಿ ನಾವು ಇಲ್ಲಿಗೆ ಬಂದಾಗ ಅವರ ಅಭಿಪ್ರಾಯವನ್ನು ಕೊಟ್ಟರೆ ಪ್ರಯೋಜನವಾಗುವುದಿಲ್ಲವೆಂದು ಈ ಮೂಲಕ ಸರ್ಕಾರಕ್ಕೆ ತಿಳಿಸ ಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಒಂದು ಸಮಿತಿಯನ್ನು ನೇಮಿಸುವುದಕ್ಕೆ ಮುಂಚೆಯೇ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ, ರೈತರ ಸಲುವಾಗಿ, ರೈತರ ಒಂದು ಹಿತದೃಷ್ಟಿಯಿಂದ, ಅವರ ಒಂದು ಹಿತವನ್ನು ಪಾಲಿಸುವ ದೃಷ್ಟಿಯಿಂದ, ಈ ಒಂದು ಸಮಿತಿಯನ್ನು ನೇಮಿಸಲಾಗಿದೆಯೆಂದು ಹೇಳಿದರು. ಮತ್ತು ಆ ಒಂದು ಸಮಿತಿ ಏನೊಂದು ವರದಿಯನ್ನು ಕೊಡುತ್ತದೆಯೋ ಅದನ್ನು ಒಪ್ಪಿಕೊಳ್ಳಲು ಸರ್ಕಾರ ಸಿದ್ಧವಿದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ.

ಆದ್ದರಿಂದ ಈ ಬಗ್ಗೆ ಇಲ್ಲಿ ಚರ್ಚೆ ಮಾಡತಕ್ಕದ್ದು ಅನಾವಶ್ಯಕ ಎಂದು ನನಗನ್ನಿಸುತ್ತಿದೆ. ಇದನ್ನು ಕಾರ್ಯ ರೂಪಕ್ಕೆ ತರತಕ್ಕಂಥಾದ್ದರ ಬಗ್ಗೆಯೂ ಹೇಳಿದ್ದಾರೆ. ಈ ಬಗ್ಗೆ ಹಣಕಾಸಿನ ಒಂದು ಇಂಪ್ಲಿಕೇಷನ್ ಏನಾದರೂ ಇದ್ದರೆ ತಾವು ಇದನ್ನು ಮುಂದೆ ಹಾಕದೇ ಒಂದೆರಡು ದಿವಸಗಳಲ್ಲಿ ಕ್ಯಾಬಿನೆಟ್ ಕರೆದು ಈ ಬಗ್ಗೆ ಚರ್ಚೆ ಮಾಡಿ ಒಂದು ಒಳ್ಳೆಯ ನಿರ್ಣಯವನ್ನು ಮಾಡಿಬಿಟ್ಟರೆ ಅದು ಜನರಿಗೆ ಗೊತ್ತಾಗುತ್ತದೆ. ಇದರಿಂದ ಸರ್ಕಾರ ಕೊಟ್ಟ ಮಾತನ್ನು ನಡೆಸಿಕೊಟ್ಟಂತಾಗುತ್ತದೆ. ಇನ್ನೊಂದು ವಾರದಲ್ಲಿ ಈ ಬಗ್ಗೆ ಒಂದು ಅಂತಿಮ ನಿರ್ಣಯವಾದರೆ ಒಳ್ಳೆಯದೆಂದು ನನ್ನ ಸಲಹೆ.

ಶ್ರೀ ಎಂ.ವಿ. ರಾಜಶೇಖರನ್.—ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ನಿನ್ನೆಯ ದಿವಸ ಈ ವಿಷಯವನ್ನು ಪ್ರಸ್ತಾಪ ಮಾಡಿದೆ. ಸರ್ಕಾರದವರು ಈ ಒಂದು ಸಮಿತಿಯನ್ನು ನೇಮಕ ಮಾಡಿ ಈಗ ಏನೊಂದು ಅಭಿಪ್ರಾಯವನ್ನು ತೆಗೆದುಕೊಂಡಿದ್ದಾರೆ ಇದರ ಒಂದು ವ್ಯಾಪಕವಾದ ಪರಿಣಾಮ ಇಡೀ ರಾಜ್ಯದ ರೈತರ ಮೇಲೆ ಬೀಳುತ್ತದೆ. ಆದುದರಿಂದ ಈ ದಿನ ಸಮಿತಿಯವರು ಕೂಲಂಕಷವಾಗಿ ಪರಿಶೀಲಿಸಿ ಏನು ಒಂದು ಇಂಟೀರಿಯಂ ರಿಪೋರ್ಟನ್ನು ಕೊಟ್ಟಿದ್ದಾರೆ...

MR. SPEAKER.—It is not a report, and it is not exhaustive. It is only a first stage of recommendation.

ಶ್ರೀ ಎಂ. ವಿ. ರಾಜಶೇಖರನ್.—ಮತ್ತೆ ಏನೆಂದು ಕರೆಯುತ್ತೀರಿ.

ಅಧ್ಯಕ್ಷರು.—ರೆಕಮಂಡೇಷನ್ಸ್ ಎಂದು ಹೇಳುತ್ತೇವೆ.

ಶ್ರೀ ಎಂ. ವಿ. ರಾಜಶೇಖರನ್.—ಇದಕ್ಕೆ ರೆಕಮಂಡೇಷನ್ಸ್ ಎಂದು ಹೇಳುತ್ತೀರಿ. ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಈ ವರದಿಯನ್ನು ಯಾವಾಗ ಸರ್ಕಾರ ಒಪ್ಪಿಕೊಳ್ಳುತ್ತದೆ, ಆತಿ ಶೀಘ್ರವಾಗಿ ಒಪ್ಪಿಕೊಳ್ಳುತ್ತೀರಾ ಎಂದು ಕೇಳಿದೆ. ಅದಕ್ಕೆ ಮುಖ್ಯಮಂತ್ರಿಗಳು ಇದನ್ನು ಕ್ಯಾಬಿನೆಟ್ ಮುಂದೆ ತರುತ್ತಿದ್ದೇವೆ, ಅಲ್ಲಿ ಚರ್ಚೆ ಮಾಡಿ ಇನ್ನು ೨-೩ ದಿವಸಗಳಲ್ಲಿ ಒಂದು ತೀರ್ಮಾನವನ್ನು ತೆಗೆದು ಕೊಳ್ಳುತ್ತೇವೆಂದು ಹೇಳಿದ್ದಾರೆ. ನಾನು ಈ ಬಗ್ಗೆ ಹೇಳುವುದೇನೆಂದರೆ, ನಮ್ಮ ವ್ಯವಸಾಯ ಮಂತ್ರಿ ಗಳು ಈ ಒಂದು ಸಮಿತಿಯ ಚೇರ್ಮನ್‌ರು ಇದ್ದಾರೆ. ಅವರು ಏನು ನಿರ್ಣಯಗಳನ್ನು ತಂದಿದ್ದಾರೆ ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿಕೊಂಡಿದ್ದೇನೆ. ಆದಷ್ಟು ಶೀಘ್ರವಾಗಿ ಇದನ್ನು ಪರಿಶೀಲನೆ ಮಾಡಿ ಜಾರಿಗೆ ಕೊಡತಕ್ಕದ್ದು ಬಹಳ ಮುಖ್ಯ ಇದೆ. ಈ ದಿನ ಮಾನ್ಯ ವ್ಯವಸಾಯ ಮಂತ್ರಿಗಳು ಈ ಬಗ್ಗೆ ಅವರ ಅಭಿಪ್ರಾಯಗಳು ಏನಿವೆ ಅವನ್ನೆಲ್ಲಾ ಸದನದ ಸದಸ್ಯರ ಗಮನಕ್ಕೆ ತಂದಿರತಕ್ಕದ್ದು ಬಹಳ ಸಂತೋಷಕರವಾದ ವಿಷಯವಾಗಿದೆ. ಈ ಬಗ್ಗೆ ಸದನದ ಸ್ಪಷ್ಟ ಅಭಿಪ್ರಾಯವನ್ನು ಕೊಡುವುದು ಸೂಕ್ತವಿದೆ. ಆದಷ್ಟು ಶೀಘ್ರವಾಗಿ ಇದರ ವಿಚಾರದಲ್ಲಿ ತಾವು ನಿರ್ಣಯ ತೆಗೆದುಕೊಳ್ಳತಕ್ಕದ್ದು ಬಹಳ ಮುಖ್ಯ ಇದೆ. ಇವತ್ತು ಪತ್ರಿಕೆಗಳಲ್ಲಿ ಈ ವಿಷಯ ಬಂದಿದೆ. ಈ ವಿಷಯವನ್ನು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿದರೋ ಇಲ್ಲವೋ ಗೊತ್ತಿಲ್ಲ, ಇದನ್ನು ಆದಷ್ಟು ಶೀಘ್ರ ವಾಗಿ ಪರಿಶೀಲನೆ ಮಾಡಿದರೆ, ರೈತರ ಸಮುದಾಯಕ್ಕೆ ಒಂದು ದೊಡ್ಡ ಅನುಕೂಲವನ್ನು ದೊರಕಿಸಿ ಕೊಟ್ಟ ಹಾಗೆ ಆಗುತ್ತದೆಂದು ನಾನು ಈ ಮೂಲಕ ಹೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಇಲ್ಲಿ ಈ ಬಗ್ಗೆ ಚರ್ಚೆ ಪ್ರಾರಂಭವಾದಾಗ ನಾನು ಸಭೆಯಲ್ಲಿ ಇರಲಿಲ್ಲ. ಈ ಬಗ್ಗೆ ಸರ್ಕಾರ ಎಷ್ಟು ಆತುರವಾಗಿದೆ ಎಂಬುದು ಎಲ್ಲ ಸದಸ್ಯರಿಗೂ ಗೊತ್ತು ಹಾಗೂ ಮಾನ್ಯ ರಾಜಶೇಖರನ್ ಅವರಿಗೂ ಸಹಾ ಗೊತ್ತು. ಅದಕ್ಕೋಸ್ಕರವೇ ಮಾನ್ಯ ಕಂದಾಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿ, ರೈತರ ಬಗ್ಗೆ ಯಾರು ಯಾರಿಗೆ ಆಸಕ್ತಿ ಇದೆಯೋ ಅವರನ್ನೆಲ್ಲಾ ಸದಸ್ಯರನ್ನಾಗಿ ಮಾಡಿ ಈ ಬಗ್ಗೆ ವರದಿ ಆದಷ್ಟು ಬೇಗ ಸರ್ಕಾರಕ್ಕೆ ಬರಲಿ ಎಂಬ ಉದ್ದೇಶದಿಂದ ಸಮಿತಿ ಸೂಚನೆ ಮಾಡಿದ್ದು. ಬಹುಶಃ ಇನ್ನೆರಡು ದಿನ ಟೈಮ್ ಇದ್ದಿದ್ದರೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದು ಕೊಳ್ಳುತ್ತಿದ್ದೇವು. When the Minister himself is the Chairman of the Committee, it is understood, that you can definitely take it for granted that almost all the recommendations will be accepted. Why are misunderstanding the whole thing? I am not a person to go back on what I have said. I stick to what I said and it will be implemented. You can happily go to your constituencies.

೧೦-೩೦ ಎ. ಎಂ.

ಶ್ರೀ ಟಿ. ಚೌಡಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿರುತ್ತಾರೆ, ಅದನ್ನು ನಿಜವಾಗಿಯೂ ಕೂಡ ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ, ಐಟಮ್ ನಂಬರ್ ಎರಡರಲ್ಲಿ, water rate should be reduced by 50% ಎಂದು ಇರುವುದರಿಂದ ಸ್ವಲ್ಪ ಅದುಮಾನಕ್ಕೆ ಆಸ್ಪದ ಉಂಟಾಗಿರುತ್ತದೆ. ಅದೇನೆಂದರೆ, ೧೯೭೯ನೇ ಇಸವಿಯಲ್ಲಿ ಮಾನ್ಯ ದೇವರಾಜ ಅರಸ್ ರವರ ಸರ್ಕಾರ ಇದ್ದಾಗ water rate enhanced specially in case of sugar-cane sugar cane harvested before 11 months Sugarcane harvested after 11 monthes and before 18 monthes ಎಂದು ಎರಡು ತರಹ ಮಾಡಿದ್ದಾರೆ, ಈ ವಿಷಯದಲ್ಲಿ ನನಗೆ ಸ್ಪಷ್ಟೀಕರಣ ಕೊಡುತ್ತೀರಾ ಎಂದು ಕೇಳುತ್ತೇನೆ.

SRI S. BANGARAPPA.–Better we shall not go deep into all the items and the recommendations of the committee. I have alread stated at the outset itself.

ಶ್ರೀ ಬಿ. ಬಸವಲಿಂಗಪ್ಪ —ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟಿರುವ ಹಿದ್ನೆಲೆಯಲ್ಲಿ ಸದನದ ಮುಂದೆ ಏನು ವರದಿಯನ್ನು ಕೊಟ್ಟಿರುತ್ತಾರೆ ಅದನ್ನು ಆದಷ್ಟು ಜಾಗ್ರತೆ ಜಾರಿಗೊಳಿಸಬೇಕೆಂದು ಹೇಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ. – ಈ ರಾಜ್ಯದಲ್ಲಿ ವ್ಯವಸಾಯವನ್ನೇ ಅವಲಂಬಿಸಿರತಕ್ಕಂಥ ರೈತರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಇಂಥ ಒಂದು ದೊಡ್ಡ ನಿಲುವನ್ನು ತೆಗೆದುಕೊಂಡು ಕೊಟ್ಟಿರ ತಕ್ಕಂಥ ವರದಿಯನ್ನು ನಾನು ಒಪ್ಪುತ್ತೇನೆ. ಮತ್ತು ಇದನ್ನು ಕಾರ್ಯಾಚರಣೆಗೆ ತರುವಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಬೇಕೆಂದು ಹೇಳಿ, ರೈತರ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಕೆಲವಾರು ದಿವಸಗಳಿಂದ ರೈತರ ಒಂದು ಚಳುವಳಿ ಪ್ರಾರಂಭವಾಯಿತು ಆದರಿಂದಾಗಿ ಅನೇಕ ಸಲಹೆಗಳನ್ನು ಸಮಿತಿಯವರು ಕೊಟ್ಟಿರು. ಅದನ್ನು ಸರ್ಕಾರದವರು ಒಪ್ಪಿಕೊಳ್ಳುತ್ತೇವೆಂದು ಹೇಳಿದ್ದಾರೆ. ಮಂತ್ರಿಗಳೇ ಆ ಸಮಿತಿಯ ಅಧ್ಯಕ್ಷರಾಗಿರುವುದರಿಂದ ಎಲ್ಲ ಇಪ್ಪತ್ತೆರಡು ಐಟಮ್‌ಗಳನ್ನು ಒಪ್ಪಿಕೊಳ್ಳುತ್ತೇವೆಂದು ಹೇಳಿರುತ್ತಾರೆ. ೨೨ರಲ್ಲಿ ೨೧ ಅ ರ ಬಗ್ಗೆ ನಾನು ಏನು ಹೇಳುವುದಿಲ್ಲ. ಆದರೆ ಒಂದು ವಿಷಯದಲ್ಲಿ ಮಾತ್ರ ಸರ್ಕಾರದವರು ಎಚ್ಚರಗೊಳ್ಳಬೇಕಾಗಿದೆ. ರೈತರು ಮಾಡಿದಂಥ ಹೋರಾಟದಲ್ಲಿ ಬಳಕೆದಾರರೂ ಕೂಡ ಸೇರಿರುತ್ತಾರೆ ಆದ್ದರಿಂದ. ನಾಲ್ಕನೇ ಐಟಮ್ ಸಪೋರ್ಟಿಂಗ್ ಪ್ರೈಸ್ ಎಂದು ಏನು ಇದೆ ಅದರ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕಾಗಿರುತ್ತದೆ. ಸರ್ಕಾರದವರು ತೀರ್ಮಾನವನ್ನು ತೆಗೆದುಕೊಳ್ಳುವಾಗ ಬಳಕೆದಾರನ ಹಿತವನ್ನೂ ಕೂಡ ಗಮನದಲ್ಲಿ ಇಟ್ಟುಕೊಂಡು ತೀರ್ಮಾನವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಆಜೀಜ್‌ಸೇಟ್.—ಮಾನ್ಯ ಸದಸ್ಯರು ಏನು ಹೇಳಿದರು ಅದು ಸತ್ಯವಾಗಿರುತ್ತದೆ. ನಾವು ಅರ್ಬನ್ ಏರಿಯಾದಲ್ಲಿ ಇರತಕ್ಕಂಥ ಜನ. ನಾವು ವ್ಯವಸಾಯವನ್ನು ಮಾಡುವುದಿಲ್ಲ. ಇವತ್ತು ತಾವು ಏನು ಸಲಹೆಗಳನ್ನು ಒಪ್ಪಿಕೊಂಡಿರುತ್ತೀರಿ. ಈ ಸಂದರ್ಭದಲ್ಲಿ ತಕ್ಕಡಿ ತೂಕದಂತೆ ತಾವು ನೋಡಬೇಕು. ನೇಗಿಲು ಹಿಡಿದು, ದುಡಿದು ಉತ್ಪಾದನೆ ಮಾಡಿ ಆಹಾರವದಾರ್ಥಗಳನ್ನು ಮಾರಾಟ ಮಾಡಲು ಪೇಟೆಗೆ ಬಂದಲ್ಲಿ ಅದಕ್ಕೆ ಧಾರಣೆವಾಸಿಗಳು ಏರಿಸುತ್ತಿರುವಾಗ, ವೈಟ್ ಕಾಲರ್ಸ್‌ಗೆ ಟಿ.ಎ.ಡಿ.ಎ. ಜಾಸ್ತಿಮಾಡುವಾಗ, ಕೂಲಿಗಾರರಿಗೆ ಸಂಬಳ ಜಾಸ್ತಿಮಾಡುವಾಗ, ನೂರಕ್ಕೆ ೮೦ ಜನ ರೈತರೇ ಇರುವಾಗ, ೧೫ ಪರ್ಸೆಂಟ್ ಹರಿಜನರಿಗೆ ಮೂರುಪರ್ಸೆಂಟ್ ಷೆಡ್ಯೂಲ್‌ಟ್ರೈಬ್ಸ್‌ಗೆ ಎಂಪ್ಲಾಯ್‌ಮೆಂಟ್. ಮಾಡುವ ಕಾಲದಲ್ಲಿ ಅರ್ಬನ್ ಏರಿಯಾದಲ್ಲಿರತಕ್ಕಂಥ ಸ್ಥಿತಿಯನ್ನೂ ಕೂಡ ತಾವು ಗಮನಿಸಬೇಕಾಗುತ್ತದೆ. ಈಗ ಧಾರಣೆವಾಸಿಗಳು ಬಹಳಮಟ್ಟಿಗೆ ಜಾಸ್ತಿಯಾಗುತ್ತಿದೆ. ಹಿಂದೆ ಮೂರು ರೂಪಾಯಿಗೆ ನಾಲು ರೂಪಾಯಿಗೆ ಸಿಕ್ಕುತ್ತಿದ್ದ ಪದಾರ್ಥಗಳು ಇಂದು ಹನ್ನೆರಡು ರೂಪಾಯಿಗಳಿಂದ ಹಿಡಿದು ಹದಿನೈದು ಇಪ್ಪತ್ತು

ರೂಪಾಯಿಗಳವರೆಗೂ ಏರಿರುತ್ತದೆ. ಇದರಿಂದ Cost of living also to go up accordingly. ಆದ್ದರಿಂದ ಅರ್ಬನ್ ಏರಿಯಾದಲ್ಲಿ ಜನರು ಏನು ಇದ್ದಾರೆ ಅವರು ಪ್ರತಿಯೊಂದಕ್ಕೂ ಈ ರೀತಿ ಬೆಲೆ ಏರುತ್ತಿದ್ದರೆ ಕೊಳ್ಳತಕ್ಕಂಥಾದ್ದು ಹೇಗೆ. We have to go in confirmity with the price index of producti n. ತಾವು ಲ್ಯಾಂಡ್ ರಿಫಾರ್ಮ್ಸ್ ಕಾನೂನನ್ನು ಜಾರಿಗೆ ತಂದಮೇಲೆ ನೂರಾರು ಎಕರೆ ಜಮೀನನ್ನು ಲೂಟಿ ಮಾಡಿದ್ದಾರೆ. ಬಾಂಡೆಡ್ ಲೇಬರ್ಸ್ ಎಂಬ ಹೇಳಿಕೊಂಡು ಹೆಂಡತಿ ಹೆಸರಿನಲ್ಲಿ, ತಮ್ಮನ ಹೆಸರಿನಲ್ಲಿ ಜಮೀನುಗಳನ್ನು ಮಾಡಿಕೊಂಡು ಇರುತ್ತಾರೆ. ಒಂದು ಎಕರೆ, ಅರ್ಧ ಎಕರೆ ಜಮೀನು ಇಟ್ಟುಕೊಂಡಿರತಕ್ಕಂಥವರು ತಮ್ಮ ಜಮೀನುಗಳನ್ನು ಕಳೆದುಕೊಂಡು ಅನೇಕ ವಿಧವಾದ ತೊಂದರೆಗಳನ್ನು ಅನುಭವಿಸುತ್ತಿರುತ್ತಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಏರುತ್ತಿರುವ ಬೆಲೆಗಳನ್ನು ಕಡಿಮೆ ಮಾಡಲು ಸೂಕ್ತ ವ್ಯವಸ್ಥೆಯನ್ನು ಮಾಡುವ ಬಗ್ಗೆ ತಮ್ಮ ಗಮನವನ್ನು ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(*INTERRUPTIONS*)

MR. SPEAKER.—What i s it that we are doing ? I do not know what we are doing.

SRI B.B. SAYANAK.—Sir today is the last day of this Session. I have received a wireless message from Khanapur Taluk stating that there is a cattle disease, and 100 cattles have died. Therefore, I request the Hon. Minister for Animal Husbandry to take proper action to prevent this disease.

ಶ್ರೀ ಬಿ.ವಿ. ಕಕ್ಕಿಲಾಯ, —ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬೇರೆ ವಿಷಯಕ್ಕೆ ಹೋಗುತ್ತಿದ್ದಾರೆ.

ಅಧ್ಯಕ್ಷರು.— ಈಗತ್ತು ಯಾವ ಕಾರ್ಯಕ್ರಮ ನೇರವಾಗಿ ಹೋಗುತ್ತಾ ಇದೆ. ಮಾನ್ಯ ಸದಸ್ಯರೆಲ್ಲರೂ ನನ್ನದೊಂದು ಪ್ರಶ್ನೆ, ನನ್ನದೊಂದು ಪ್ರಶ್ನೆ, ಎಂದು ಕೇಳುತ್ತಿದ್ದರೆ ಯಾರ ಪ್ರಶ್ನೆಗೆ ಪ್ರಾಮುಖ್ಯತೆಯನ್ನು ಕೊಡುವುದಕ್ಕೆ ಸಾಧ್ಯ. ಮಾನ್ಯ ಸಚಿವರು ಹೇಳಿದ ಮೇಲೆ ಮತ್ತೆ ತಮ್ಮದು ಏನಾದರೂ ಇದ್ದರೆ ಕೇಳಿ.

ಶ್ರೀ ಬಿ.ವಿ. ಕಕ್ಕಿಲಾಯ.— ನಾನು ಅವರು ಹೇಳಿದ್ದನ್ನು ಸ್ವಾಗತ ಮಾಡುತ್ತೇನೆ. ಆದರೆ ಅವರು ಬೇರೆ ವಿಷಯಕ್ಕೆ ಹೋದದ್ದರಿಂದ ನಾನು ಕೇಳುತ್ತಾ ಇದ್ದೇನೆ.

MR. SPEAKER.—This is not the way of co nducting in the House. I want to know whether Members are not interesting to do the business of the House. Do they want to adjourn the House ? As this is the last day, I don't want to displeas the Members are not sticking to the agenda and the business.

ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಹೇಳಿಕೆಯನ್ನು ಹೇಳಿದ ಮೇಲೆ ಮಾನ್ಯ ಸದಸ್ಯರುಗಳು. ತಮ್ಮ ಕ್ಲಾರಿಫಿಕೇಷನ್ಸ್ ಏನಾದರೂ ಇದ್ದರೆ ಕೇಳಬಹುದು. ಒಬ್ಬ ಮಾನ್ಯ ಸದಸ್ಯರು ಮಾತನಾಡುತ್ತಿರುವಾಗ ಮಧ್ಯೆ ಬಹಳ ಜನ ಎದ್ದು ಮಾತನಾಡುವುದು ಸರಿಯಲ್ಲವೆಂದು ಎಷ್ಟುಸಾರಿ ಹೇಳಿದರೂ ನೀವು ಇದೇ ರೀತಿ ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಸದಸ್ಯರಾದ ಶ್ರೀಮಾನ್ ಆಜೀಜ್ ಸೇಠ್‌ರವರು ಹೇಳಿದ್ದರಿಂದ ನಾವು ಹೇಳಬೇಕಾಗುತ್ತದೆ.

SRI B.B. SAYANAK.—I want the assurance from the Minister concerned. Sri. Y. Ramakrishna that he must take care of the cattles.

SRI Y. RAMAKRISHNA.—Please write a letter and I shall take immediate action.

ಅಧ್ಯಕ್ಷರು.—ನಾನು ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಅರಕೇರಿಯವರ ಪೆಸರನ್ನು ಕೂಗಿದ್ದೇನೆ. ಅವರು ಮಾತನಾಡಿದ ನಂತರ ನೀವು ಮಾತನಾಡಿ.

(iv) Re Poisoning etc. of the water in a well used by Harijans in Handral village Bijapur District.

ಶ್ರೀ ಎಸ್.ಎಸ್. ಅರಕೇರಿ.—ಸ್ವಾಮಿ, ಬಿಜಾಪುರದಿಂದ ನನಗೆ ಒಂದು ಟೆಲಿಗ್ರಾಂ ಬಂದಿದೆ. ಇದು ಬಹಳ ಪ್ರಮುಖವಾದ ವಿಚಾರ,ಬಿಜಾಪುರಜಿಲ್ಲೆಯ ಹಂದ್ರಾಳ್ ಎಂಬ ಊರಿನಲ್ಲಿ ಹರಿಜನರ ಒಂದು ಬಾವಿ ಇದೆ. ಆ ಬಾವಿಗೆ ಯಾರೋ ಕಿಡಿಗೇಡಿಗಳು ವಿಷವನ್ನು ಹಾಕಿದ್ದಾರೆ, ಫಾಲಿಡಾಲ್ ಹಾಕಿದ್ದಾರೆ.ಕಕ್ಕಸನ್ನು ಲಾರ್ಜ್ ಸ್ಕೇಲ್‌ನಲ್ಲಿ ತೆಗೆದುಕೊಂಡು ಹೋಗಿ ಅದರಲ್ಲಿ ಸುರಿದಿದ್ದಾರೆ.ಕಳೆದ ೧೦ ದಿವಸಗಳಿಂದಲೂ ಅಲ್ಲಿಯ ಜನ ನೀರಿಗಾಗಿ ಬಹಳ ತೊಂದರೆ ಪಡುತ್ತಿದ್ದಾರೆ. ಇವರು ಅಸ್ಪೃಶ್ಯರು. ಆದ್ದರಿಂದ ಬೇರೆ ಬಾವಿಗಳಿಗೆ ಹೋಗುವಂತಿಲ್ಲ. ಈ ಬಗ್ಗೆ ಅಲ್ಲಿಯ ಜಿಲ್ಲಾಧಿಕಾರಿಯವರಿಗೆ ಮತ್ತು ಪೋಲೀಸ್ ಸೂಪರಿಂಟೆಂಡೆಂಟ್‌ರವರಿಗೆ ದೂರು ಕೊಟ್ಟರೂ ಕೂಡ ಅವರು ಯಾವುದೇ ಸೂಕ್ತ ಕ್ರಮವನ್ನೂ ತೆಗೆದುಕೊಂಡಿಲ್ಲ. ಆ ಬಾವಿಯಲ್ಲಿ ವಿಷ ಹಾಕಿರುವುದರಿಂದ ಅದರಲ್ಲಿದ್ದ ಕಪ್ಪೆ, ಹಾವು ಮುಂತಾದುವು ಸತ್ತುಹೋಗಿವೆ. ಇದು ಬಹಳ ವಿಷಾದನೀಯವಾದ ಸಂಗತಿ. ಅಲ್ಲಿರತಕ್ಕ ಹರಿಜನರು ಕುಡಿಯುವ ನೀರಿಗಾಗಿ ಸುಮಾರು ೩ ೪ ಮೈಲಿಗಳ ದೂರ ಹೋಗಿ ತರುತ್ತಿದ್ದಾರೆ. ಸರ್ಕಾರದವರು ಆ ಬಾವಿಯನ್ನು ಸ್ವಚ್ಛಪಮಾಡಿಸುವ ಗೋಜಿಗೇ ಹೋಗಿಲ್ಲ. ಇಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಇರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ ಈ ಕೂಡಲೇ ಅಲ್ಲಿನ ಜಿಲ್ಲಾಧಿಕಾರಿಯವರಿಗೂ ಮತ್ತು ಪೋಲೀಸ್ ಸೂಪರಿಂಟೆಂಡೆಂಟ್‌ರವರಿಗೂ ಒಂದು ಆದೇಶವನ್ನು ನೀಡಿ ಅಲ್ಲಿಯ ಜನರಿಗೆ ಕುಡಿಯುವ ನೀರನ್ನೊದಗಿಸಲು ಸೂಕ್ತ ವ್ಯವಸ್ಥೆ ಮಾಡುವುದಲ್ಲದೆ ಯಾರು ಕಲ್ಪಿಟ್ಸ್ ಇದ್ದಾರೆ ಅವರಮೇಲೆ ಉಗ್ರ ಕ್ರಮವನ್ನು ತೆಗೆದು ಕೊಳ್ಳುವಂತೆ ಮಾಡ ಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಭಾರತದ ೩೩ ವರ್ಷಗಳಇತಿಹಾಸದಲ್ಲಿ ರೈತರ ಚಳುವಳಿಯು ಆಗಿರುವುದು ನಮ್ಮ ಕರ್ನಾಟಕದಲ್ಲಿ ಮೊಟ್ಟಮೊದಲನೇ ಬಾರಿಗೆ.ಆ ದಿನ ಯಾವುದು ಎಂದರೆ ತಾರೀಖು ೨೧–೭–೧೯೮೦ ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ರೈತರ ಬಗ್ಗೆ ತೋರಿರುವ ಅಪಾರವಾದ ಅನುಕಂಪವನ್ನು ಮೆಚ್ಚಿ ವಿರೋಧಪಕ್ಷದ ಮಾನ್ಯ ಸದಸ್ಯರಾದ ಶ್ರೀಮಾನ್ ಹೆಚ್.ಡಿ. ದೇವೆಗೌಡರು ನಮ್ಮ ಮಾನ್ಯ ಮುಖ್ಯ ಮಂತ್ರಿಯವರನ್ನು ತುಂಬು ಹೃದಯದಿಂದ ಅಭಿನಂದಿಸಿದ್ದಾರೆ. ಮುಖ್ಯ ಮಂತ್ರಿಯವರು ಮಾಡಿರುವ ಒಳ್ಳೆಯ ಕೆಲಸದ ಸೂಚಕವಾಗಿ ಒಂದು ಯುನಾನಿಮಸ್ ರೆಸಲ್ಯೂಷನ್‌ನ್ನು ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಬೀದರ್ ಜಿಲ್ಲೆಯಿಂದ ನನಗೆ ಒಂದು ಟೆಲಿಗ್ರಾಂ ಬಂದಿದೆ. ವಾಸ್ತವವಾಗಿ ಮಾನ್ಯ ಮುಖ್ಯ ಮಂತ್ರಿಯವರು ಬಹಳ ಒಳ್ಳೆಯ ಕೆಲಸವನ್ನು ಮಾಡಿರುವುದರಿಂದ ಅಲ್ಲಿ ಶ್ರೀಮಾನ್ ಗುಂಡೂರಾವ್ ರವರ ಪ್ರತಿಮೆಯನ್ನು ಸ್ಥಾಪನೆ ಮಾಡಬೇಕೆಂದು ಸೂಚಿಸಿದ್ದಾರೆ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀಮಾನ್ ಅರಕೇರಿಯವರು ಒಂದು ಗಮನಾರ್ಹ ವಿಚಾರವನ್ನು ಸಭೆಯ ಗಮನಕ್ಕೆ ತಂದು ಹರಿಜನರ ಬಾವಿಯೊಂದಕ್ಕೆ ಯಾರೋ ಕಿಡಿಗೇಡಿಗಳು ವಿಷ ಹಾಗೂ ಕಕ್ಕಸನ್ನು ಸುರಿದಿದ್ದಾರೆ, ಇದರಿಂದ ಅಲ್ಲಿನ ಜನರಿಗೆ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ, ಅಲ್ಲಿನ ಜನರು ೩–೪ ಮೈಲಿ ದೂರ ಹೋಗಿ ನೀರನ್ನು ತರಬೇಕಾಗಿದೆ ಎಂದು ಹೇಳಿದರು, ಅಲ್ಲಿಯ ಸೂಪರಿಂಟೆಂಡ್ ಆಫ್ ಪೋಲಿಸ್ ಮತ್ತು ಜಿಲ್ಲಾಧಿಕಾರಿಯವರೂ ಕೂಡಲೇ ಅಲ್ಲಿಗೆ ಹೋಗಿ ವಾಸ್ತವಾಂಶ ಏನಂಬುದನ್ನು ಪರಿಶೀಲಿಸಿ, ತಪ್ಪಿತಸ್ಥರ ಮೇಲೆ ತೀವ್ರ ಕ್ರಮ ತೆಗೆದು